doc-560
T-P-2

Reg No B G 155 11 — 10 —72

In The State **First Golden Jubilee Celebrated Paper 'Satyavadi' daily, Mysore 4**

56 th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಕಂಡ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪ್ರತಿ

ಡಿ. ಎಂ. ಕೆ. ಪಕದಿಂದ ಎಂ. ಜಿ. ಆರ್. ರನ್ನು ಸಸೆಂಡ್ ಮಾಡಲಾಗಿದೆ

ಪುರಸಭೆಯಲ್ಲಿ

ಮೈಸೂರು ದಸರಾ ಉತ್ಸವಗಳ ಪ್ರಾರಂಭೋತ್ಸವ ರೀತಿ ಮತ್ತು ಪೌರಸಭಾಧ್ಯಕ್ಷರ ಬಗ್ಗೆ ತೋರಿಸಿದ ಅಗೌರವ ಕುರಿತು ಪುರಸಭಾಧಿವೇಶನದಲ್ಲಿ ತೀವ್ರವಾಗಿ ಖಂಡಿಸಲಾಯಿತು — ಉತ್ಸವಗಳ ಉಪಸಮಿತಿ ಅಧ್ಯಕ್ಷರು ಇಂಗ್ಲೀಷಿನಲ್ಲಿ ಮಾತನಾಡಿ ಕನ್ನಡಾಂಬೆಗೆ ಅಗೌರವ ವ್ಯಕ್ತಪಡಿಸಿದರೆಂದು ಸದಸ್ಯರು ಹೇಳಿದರು.

★

ಹೀಗೆ ಎಂದೂ ಆಗಬಾರದು

ಪೌರಸಭಾಧ್ಯಕ್ಷ ಶ್ರೀ ಕೆ. ಸೋಮಸುಂದರಂರವರಿಗೆ ದಸರಾ ಉತ್ಸವ ಸಂದರ್ಭಗಳಲ್ಲಿ ಅಗೌರವಗೊಳಿಸಿದುದು ವಿಷಾದನೀಯವು.

"ಸಂಗಂ" ಚಿತ್ರಮಂದಿರ ಕಳೆದ ವರ್ಷ ಪ್ರಾರಂಭವಾದಾಗ, ಆಗ ಪುರಾಸಭಾಧ್ಯಕ್ಷರಾಗಿದ್ದ ಶ್ರೀ ಜೋಗಿ ಸಿದ್ದಯ್ಯನವರಿಗೆ ರಾಜಕುಮಾರರು ಕುಳಿತಿದ್ದ ವೇದಿಕೆಯ ಸಾಲಿನಲ್ಲಿ ಸ್ಥಳ ಸಿಗದೆ ಆಹ್ವಾನಿತರು ಕುಳಿತಿದ್ದ ಸ್ಥಳದಲ್ಲಿ ಕುಳಿತುಕೊಳ್ಳಬೇಕಾದುದನ್ನು ಇಲ್ಲಿ ಸ್ಮರಿಸಬಹುದು.

ನಗರದ ಪ್ರಥಮ ಪ್ರಜೆ ಆದವರಿಗೆ ಅಗೌರವವಾಗುವುದು ಇನ್ನು ಮುಂದಾದರೂ ನಿಲ್ಲಲಿ.

★

ಕನ್ನಡ ಸಂಘಕ್ಕೆ ಸಹಾಯ

ಮದರಾಸು— ಅಯನಾವರಂ ಕನ್ನಡ ಸಂಘಕ್ಕೆ ಭೇಟಿಇತ್ತ ಮೈಸೂರು ವಿದ್ಯಾಮಂತ್ರಿ ಶ್ರೀ ಬಿದ್ರಿನಾರಾಯಣರು— ಸಂಘದ ವಿನಂತಿಗಳಾದ, ಸ್ಕೂಲು ಗ್ರಾಂಟು ಮುಂದುವರಿಸುವುದು, ಮದರಾಸಿನಲ್ಲಿ ಕನ್ನಡ ಪುಸ್ತಕ ಭಂಡಾರ ಸ್ಥಾಪನೆ, ಸ್ಕೂಲಿಗೆ ಬಸ್ ಕೊಳ್ಳಲು ಆರ್ಥಿಕ ನೆರವು, ಇವುಗಳನ್ನು ಸರಕಾರ ಅನುಕೂಲವಾಗಿ ಪರಿಶೀಲಿಸುವುದೆಂದು ಭರವಸೆ ಇತ್ತರು

★

ಮದ್ಯ, ಹುಡುಗಿಯರಿಂದಾದ ಅನಾಹುತ

ಮೆಕ್ಸಿಕೊ ನಗರ— ಶುಕ್ರವಾರ ಸಾಲ್ಟಿಲೋನಾದಲ್ಲಾದ 189 ಮಂದಿ ಸತ್ತು ಸಾವಿರ ಮಂದಿ ಗಾಯಗೊಂಡ ಭೀಕರ ರೈಲ್ವೆ ಅನಾಹುತಕ್ಕೆ ರೈಲು ಚಾಲಕರ ಗಮನವು ಕ್ಯಾಬಿನಲ್ಲಿ ಮದ್ಯ ಮತ್ತು ಹುಡುಗಿಯರ ಕಡೆ ಇದ್ದುದೇ ಕಾರಣವೆಂದು ವ್ಯಕ್ತಪಟ್ಟಿದೆ — 5 ಮಂದಿ ಚಾಲಕರನ್ನು ನರಹತ್ಯೆ, ಗಾಯಗೊಳಿಸಿದು, ಸಾರ್ವಜನಿಕ ಆಸ್ತಿ ನಷ್ಟಪಡಿಸಿದ ತಕ್ಸೀರಿಗೆ ಬಂಧಿಸಲಾಗಿದೆ.

❁

5 ಪೈಸಾ 10 ಪೈಸಾ ಫಂಡು

ಇಂದುಚಾಚಾನಗರ— ಅಹಮದಾಬಾದಿನಲ್ಲಿ ಕಾಂಗ್ರೆಸ್ ಭವನ ಕಟ್ಟಲು ವ್ಯಕ್ತಿಗಳಿಂದ ಪಟ್ಟಣಗಳಲ್ಲಿ 10 ಪೈಸೆ, ಗ್ರಾಮಾಂತರಗಳಲ್ಲಿ 5 ಪೈಸೆ ಶೇಖರಿಸಲಾಗುವದೆಂದು ಏ ಐ ಸಿ ಸಿ ಯಲ್ಲಿ ಸ್ವಾಗತಾಧ್ಯಕ್ಷರು ಹೇಳಿದರು ; ಅತಿ ಹೆಚ್ಚಿನ ಚಂದಾ ರೂ 100 ಎಂದಿರುವರು

★

ಅಕ್ಕಿ ಗೋಧಿ ಒಟ್ಟಾರೆ ವ್ಯಾಪಾರ

ಇಂದುಚಾಚಾನಗರ— ಅಕ್ಕಿ ಮತ್ತು ಗೋಧಿ ಒಟ್ಟಾರೆ ವ್ಯಾಪಾರವನ್ನು ಸರಕಾರ ವಹಿಸಿಕೊಳ್ಳುವಂತೆಯೂ, ಇತರ ಅವಶ್ಯ ಪದಾರ್ಥಗಳ ಪರಿಣಾಮಕಾರಿ ಹಂಚಿಕೆ ಕ್ರಮವನ್ನು ನಿರ್ಮಿಸಲೂ ಎ ಐ ಸಿ ಸಿ ಯಲ್ಲಿ ನಿರ್ಣಯಿಸಲಾಯಿತು

★

ಮುಸ್ಲಿಂರ ವಿದ್ಯಾ ಮತ್ತು ಆರ್ಥಿಕ ಅಭಿವೃದ್ಧಿಗೆ

ಮೈಸೂರು— ವಿವಿಧ ಮುಸ್ಲಿಂ ಟ್ರಸ್ಟ್‌ಗಳ ಆಸ್ತಿಯಲ್ಲಿನ ಹಣವನ್ನು ಒಂದುಗೂಡಿಸಿ, ಅದನ್ನು ಈ ಕೋಮಿನ ವಿದ್ಯಾ ಮತ್ತು ಆರ್ಥಿಕ ಅಭಿವೃದ್ಧಿಗೆ ಉಪಯೋಗಿಸಲು ಅನುಕೂಲವಾಗುವಂತೆ ವಾಕ್ಫ್ ಅಭಿವೃದ್ಧಿ ಸಂಸ್ಥೆ ಸ್ಥಾಪಿಸಲಾಗುವುದೆಂದು ಮಂತ್ರಿ ಶ್ರೀ ಅಜೀಜ್‌ಸೇಟರು ಮುಸ್ಲಿಂ ವಿದ್ಯಾ ಸಂಸ್ಥೆಯ ಮೈಸೂರು ಶಾಖೆಯನ್ನು ಉದ್ಘಾಟಿಸುತ್ತಾ ಹೇಳಿದರು.

★

ಇದೊಂದು ರೀತಿ ಮೆರವಣಿಗೆ

ತುಮಕೂರು— ಆಹಾರದ ಮತ್ತು ದಿನಬಳಕೆ ಪದಾರ್ಥಗಳ ದಾಸ್ತಾನುಗಾರರ ಮತ್ತು ಕಾಳಸಂತೆಕೋರರ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಕೊಡಲು ಊರಿನಲ್ಲಿ ತಾ || 12 ರಂದು ಮೆರವಣಿಗೆ ಮತ್ತು ಸಭೆ ನಡೆಸಲಾಗುವದೆಂದು ಹೇಳಲಾಗಿದೆ.

ಡಾ || ನೆಹರೂ

ನೇತ್ರದಾನಿ ಪದ್ಮಭೂಷಣ ಡಾ || ಎಂ. ಸಿ ಮೋದಿಯವರು (ರಾಷ್ಟ್ರಾಧ್ಯಕ್ಷರ ಗೌ || ನೇತ್ರವೈದ್ಯರು) ಬೆಳಗಾವಿಯ ಇಸ್ಮೇಲಿಯಾ ಸ್ಕೂಲಿನಲ್ಲಿ ತಾ || 15 ರಂದು ಉಚಿತ ನೇತ್ರ ಆಪರೇಷನ್ ಶಿಬಿರ ನಡೆಸುವರು.

ಎಂ ಜಿ ಆರ್ ಮೇಲೆ ಕ್ರಮ

ಮದರಾಸು— ಆಡಳಿತ ಪಕ್ಷ ಡಿಎಂಕೆಯ ಕಾರ್ಯಕಾರಿ ಸಮಿತಿ ವಿಸ್ತರಿಸಿದ ಸಮಯದಲ್ಲಿ ಪಾರ್ಟಿ ಸ್ಥಾಪಕರಲ್ಲಿ ಒಬ್ಬರೂ, ಪಾರ್ಟಿಯ ಖಜಾಂಚಿಯೂ ಆದ ಖ್ಯಾತ ಸಿನಿಮಾನಟ ಶ್ರೀ ಎಂ ಜಿ. ರಾಮಚಂದ್ರರನ್ನು ಆಶಿಸ್ತಿನ ಆಪಾದನೆಗಾಗಿ ಸಸ್ಪೆಂಡು ಮಾಡಲಾಗಿದೆ.

●

ಜಡ್ಜರ ಮೇಲೆ ಕುರ್ಚಿ ಎಸೆತ

ಎರ್ನಾಕುಲಂ— ತನ್ನ ವಿರುದ್ಧವಾಗಿ ಕೊಡಲಾದ ತೀರ್ಪಿನಿಂದ ಕ್ರೋಧಗೊಂಡ ಒಬ್ಬ ಪ್ರತಿವಾದಿಯು ಇಲ್ಲಿಯ ಕೋರ್ಟಿನ ಸಬ್‌ಜಡ್ಜರ ಮೇಲೆ ಕುರ್ಚಿ ಎಸೆದನು ; ಅವರಿಗೆ ಸ್ವಲ್ಪ ಗಾಯವಾಯಿತು; ಈತನು ಲಾಯರನ್ನಿಡದೆ ತಾನೇ ಅರ್ಗ್ಯುಮೆಂಟ್ ಮಾಡಿದ್ದನು : ಪೋಲೀಸರು ಅವನನ್ನು ಬಂಧಿಸಿದರು.

★

ರಥದ ಬೆಳ್ಳಿ ತಗಡಿನ ಕಳವು

ತಿರುಪತಿ— ತಿರುಪತಿ ದೇವಾಲಯದ ಬೆಳ್ಳಿ ರಥದಲ್ಲಿನ 15 ಕಿಲೋ ತೂಕದ ಬೆಳ್ಳಿ ತಗಡುಗಳು ನಾಪತ್ತೆಯಾಗಿದೆ.

●

ಕೃಷಿಸಂಸ್ಥೆಯ 52 ನೇ ಪ್ರದರ್ಶನ

ಹನೋವರ್— ಜರ್ಮನ್ ಕೃಷಿಸಂಸ್ಥೆಯ 52 ನೇ ಪ್ರದರ್ಶನವನ್ನು ಕಾಣಲು ಕಮ್ಮಿ ಪಕ್ಷ 300000 ಪ್ರೇಕ್ಷಕರು ಬಂದಿರಬಹುದು ; ಎಂಟು ದಿವಸ ಜರುಗಿದ ಈ ಪ್ರದರ್ಶನದಲ್ಲಿ 21 ದೇಶಗಳ 1000 ಕಂಪೆನಿಗಳಾದರೂ ತಮ್ಮ ಸಾಮಾನುಗಳನ್ನು ಪ್ರದರ್ಶಿಸಿದ್ದವು ; ಟ್ರಾಕ್ಟರುಗಳು, ಬೀಜಗಳು ಗೊಬ್ಬರಗಳು, ಕಟ್ಟಡಸಾಮಾನುಗಳು ಲೆಕ್ಕವಿಲ್ಲದಷ್ಟು ಇಡಲ್ಪಟ್ಟಿದ್ದವು ; ಜಗತ್ತಿನ ಯಾವಮೂಲೆಯಿಂದ ರೈತರು ಬಂದಿದ್ದರೂ ಅವರಿಗೆ ಒಂದಲ್ಲ ಒಂದು ಅಭಿರುಚಿ ತೋರಿಸುವ ಸಾಮಾನುಗಳಿದ್ದವು. [ಏಷ್ಯಾ

ದಸರಾ ಮಹೋತ್ಸವ 1972

ದಿನಾಂಕ 12-10-72 ಮತ್ತು 13-10-72 ರ
ಸಾಂಸ್ಕೃತಿಕ ಹಾಗೂ ಚಲನಚಿತ್ರೋತ್ಸವ ಕಾರ್ಯಕ್ರಮಗಳು

ಸ್ಥಳ : ಕಾಫರ್ಡ್ ಭವನ ಸಂಜೆ : 6-00 ಘಂಟೆಗೆ

12-10-72	ಕುಮಾರಿ ಉಷಾ ದಾತಾರ್	ನೃತ್ಯ
13-10-72	ಬೇಬಿ ಗಾಯತ್ರಿ ದೇವಿ [6 ರಿಂದ 8 ರ ವರೆಗೆ]	ವೀಣಾವಾದನ
	ಸುರೇಖ ಮತ್ತು ವೃಂದ [8-15 ರಿಂದ 10-30 ರ ವರೆಗೆ]	ಭರತನಾಟ್ಯ ಕೂಚುಪುಡಿ

ಟಿಕೆಟ್ ದರ : ರೂ 3, 2 ಮತ್ತು 1

ಚಲನಚಿತ್ರಗಳು

ಗುರುವಾರ 12-10-1972 ಶುಕ್ರವಾರ 13-10-1972

ಸಂಗಮ

ಬೆಳಿಗ್ಗೆ 10-30
ಮಲ್ಲೇಶ್ವರಿ ತೆಲುಗು 1951
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9-30
ಬ್ರೀದ್‌ಲೆಸ್ ಫ್ರಾನ್ಸ್ 1960

ಬೆಳಿಗ್ಗೆ 10-30
ಅತಿಥಿ ಬಂಗಾಲಿ 1965
ಮಧ್ಯಾಹ್ನ 3 30 ಸಂಜೆ 6 30
ರಾತ್ರಿ 9 30
ಗುಡ್ ಬೈ ಕೊಲಂಬಸ್ ಯು ಎಸ್ ಎ 1969

ಪ್ರಭಾ

ಬೆಳಿಗ್ಗೆ 10-30
ಮತಿರ್ ಮನಿಷ ಒರಿಯ 1968
ಮಧ್ಯಾಹ್ನ 3 30 ಸಂಜೆ 6 30
ರಾತ್ರಿ 9 30
ಪ್ರತಿಧ್ವನಿ ಬಂಗಾಲಿ

ಬೆಳಿಗ್ಗೆ 10 30
ಕೋಟಿ ಹಿಂದಿ 1942
ಮಧ್ಯಾಹ್ನ 3 30 ಸಂಜೆ 6 30
ರಾತ್ರಿ 9 30
ಅಪೂರ್ ಸನ್ಸಾರ್ ಬಂಗಾಲಿ 1959

ಗಾಯತ್ರಿ

ಬೆಳಿಗ್ಗೆ 10 30
ಅಜಂತ್ರಿಕ್ ಬಂಗಾಲಿ 1958
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9-30
ಫಾಹ್ರೆನ್‌ಹೀಟ್ 451
ಯು ಕೆ 1971

ಬೆಳಿಗ್ಗೆ 10 30
ಸಾಧಿ ಮಾನ್ಸ ಮರಾಠಿ 1968
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ದೋ ಆಂಕೆ ಬರ್ಹಾ ಹಾತ್ ಹಿಂದಿ 1957

ಗಣೇಶ್

ಬೆಳಿಗ್ಗೆ 10 30
ಸೌಗಂಧ್ ಹಿಂದಿ 1942
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ಗೆಜ್ಜೆ ಪೂಜೆ ಕನ್ನಡ

ಬೆಳಿಗ್ಗೆ 10 30
ಎಫ್ ಟಿಐಐ ಸ್ಟೂಡೆಂಟ್ಸ್ ಫಿಲಂಸ್ ಅಂಡ್
ಥ್ರೀ ಆಫ್ ಡೈಸ್ ಸೈಲೆಂಟ್ 1929
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ವೇಜಸ್ ಆಫ್ ಫಿಯರ್
ಫ್ರಾನ್ಸ್ 1952

ಶಾಲಿಮಾರ್

ಬೆಳಿಗ್ಗೆ 10 30
ಹರಿಶ್ಚಂದ್ರ ಕನ್ನಡ
ಮಧ್ಯಾಹ್ನ 3 30, ಸಂಜೆ 6-30
ರಾತಿ, 9 30
ಜೆಸ್ಟರ್ಸ್ ಟೀಲ್
ಜಕೋಸ್ಲಾವಕಿಯ 1967

ಬೆಳಿಗ್ಗೆ 10-30, ಮಧ್ಯಾಹ್ನ 3-30
ಸಂಜೆ 6 30, ರಾತ್ರಿ 9 30
ಶರಸಂಜಠ ಕನ್ನಡ

ಚಾಮುಂಡೇಶ್ವರಿ

ಬೆಳಿಗ್ಗೆ 10-30
ಹಣ್ಣೆಲೆ ಚಿಗುರಿದಾಗ ಕನ್ನಡ
ಮಧ್ಯಾಹ್ನ 3-30, ಸಂಜೆ 6 30
ರಾತ್ರಿ 9 30
ಗುದ್ದಿ ಹಿಂದಿ 1971

ಬೆಳಿಗ್ಗೆ 10 30
ಬೇಡರ ಕಣ್ಣಪ್ಪ ಕನ್ನಡ
ಮಧ್ಯಾಹ್ನ 3 30 ಸಂಜೆ 6 30
ರಾತ್ರಿ 9-30
ಸಾರಾ ಆಕಾಶ್ ಹಿಂದಿ 1969

ರಣಜಿತ್

ಬೆಳಿಗ್ಗೆ 10-30
ವಸಂತಸೇನ ಕನ್ನಡ
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ಟಾಗೋರ್ ಮತ್ತು ಸನೂಪ್ತಿ ಬಂಗಾಲಿ 1961

ಬೆಳಿಗ್ಗೆ 10 30
ಹರಿಶ್ಚಂದ್ರ ಕನ್ನಡ
ಮಧ್ಯಾಹ್ನ 3 30 ಸಂಜೆ 6 30
ರಾತ್ರಿ 9 30
ದಿ ಬಿಸ್ಪ್ ವೈಜ್ ಜಕೋಸ್ಲಾವಕಿಯ 1969

ಪ್ರವೇಶ ದರ ರೂ. 1-00 ಮತ್ತು 2-00
ಆಯಾ ಥಿಯೇಟರ್‌ಗಳಲ್ಲಿ ಟಿಕೆಟ್‌ಗಳು ದೊರೆಯುತ್ತವೆ
ಕಾರ್ಯಕ್ರಮ ಚಿಕ್ಕಪುಟ್ಟ ಬದಲಾವಣೆಗೆ ಒಳಪಟ್ಟಿರುತ್ತದೆ

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore

ಪುಡ್‌ಲಾಂಡ್ 6-10-72 ರಿಂದ ಅಮೋಘ 2 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಆತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ಅಪೂರ್ವ 6 10 72 ರಿಂದ

ಅಮೋಘ ತೆಲುಗು ಚಿತ್ರ

ಇನ್‌ಸ್ಪೆಕ್ಟರ್ ಭಾರ್ಯ

ಪಾತ್ರ : ಕೃಷ್ಣ, ಜ್ಯೋತಿಲಕ್ಷ್ಮಿ, ಚಂದ್ರಕಲ

ಗಾಂಧಿ ವಾಣಿ

ಹಿಂದುಗಳ ಪವಿತ್ರ ಜೀವಿಯಾದ ಗೋವು ಪ್ರಪಂಚದಲ್ಲಿ ಹತ್ಯೆಗೆ ಅತಿ ಸುಲಭಸಾಧ್ಯವಾಗಿರುವುದು ಎಷ್ಟೊಂದು ಶೋಚನೀಯವು. ಗೋಸಂರಕ್ಷಣೆಯ ತತ್ವವನ್ನು ಸ್ವರಾಜ್ಯಕ್ಕಾಗಿ ಕೂಡಿ ನಾನು ಬಿಟ್ಟುಕೊಡಲಾರೆ.